# ನಾಟಕ ಸಾಹಿತ್ಯ ಮತ್ತು ರಂಗಪ್ರಯೋಗ

**ಮಾರುತೇಶ ಕೆ.ಟಿ.*** & **ಗೀತಾವಸಂತ****

**DOI: https://doi.org/10.5281/zenodo.22107728**

**ABSTRACT**

ಭಾರತೀಯ ನಾಟ್ಯಶಾಸ್ತ್ರದ ತಳಹದಿಯ ಮೇಲೆ ಬೆಳೆದ ಕನ್ನಡ ನಾಟಕ ಪರಂಪರೆಯು ಮರಾಠಿ ಹಾಗೂ ಪಾರ್ಸಿ ಕಂಪನಿಗಳ ಪ್ರಭಾವದೊಂದಿಗೆ ವೃತ್ತಿ ರಂಗಭೂಮಿಯಾಗಿ ರೂಪುಗೊಂಡಿತು. ಶಾಂತಕವಿಗಳ ನಾಟಕ ಮಂಡಳಿ ಮತ್ತು ಗುಬ್ಬಿ ಕಂಪನಿಗಳು ಈ ಹಾದಿಯಲ್ಲಿ ಭದ್ರ ಬುನಾದಿ ಹಾಕಿದವು. ಆರಂಭಿಕ ಅನುವಾದಗಳಾಚೆಗೆ, ಕೈಲಾಸಂ, ಸಂಸ, ಶ್ರೀರಂಗ, ಕುವೆಂಪು ಮುಂತಾದವರಿಂದ ಸ್ವತಂತ್ರ ಹಾಗೂ ವೈಚಾರಿಕ ನಾಟಕಗಳು ಸೃಷ್ಟಿಯಾದವು. ನವ್ಯ ಕಾಲಘಟ್ಟದಲ್ಲಿ ಗಿರೀಶ್ ಕಾರ್ನಾಡ್, ಕಂಬಾರ ಹಾಗೂ ಲಂಕೇಶ್‌ರಂತಹ ದಿಗ್ಗಜರು ಪುರಾಣ, ಜಾನಪದ ಮತ್ತು ಚರಿತ್ರೆಗಳನ್ನು ಸಮಕಾಲೀನ ತಲ್ಲಣಗಳಿಗೆ ಮುಖಾಮುಖಿಯಾಗಿಸಿದರು. ಕೇವಲ ಸಾಹಿತ್ಯಕ ಪಠ್ಯವಾಗಿದ್ದ ನಾಟಕಗಳನ್ನು ಬಿ.ವಿ. ಕಾರಂತ, ಪ್ರಸನ್ನ, ಸಿ.ಜಿ.ಕೆ ಹಾಗೂ ಸಿ. ಬಸವಲಿಂಗಯ್ಯ ಅವರಂತಹ ನಿರ್ದೇಶಕರು ತಮ್ಮ ವಿನೂತನ ರಂಗತಂತ್ರಗಳ ಮೂಲಕ ಜೀವಂತಗೊಳಿಸಿದರು. ಕೇವಲ ಮನರಂಜನೆಯ ಸಾಧನವಾಗಿದ್ದ ರಂಗಭೂಮಿ, ದಲಿತ-ಬಂಡಾಯ ಕಾಲಘಟ್ಟದಲ್ಲಿ ಸಾಮಾಜಿಕ ಜಾಗೃತಿಯ ಪ್ರಬಲ ಅಸ್ತ್ರವಾಗಿ ವಿಕಸನಗೊಂಡ ಬಗೆ ಇಲ್ಲಿ ಅನಾವರಣಗೊಂಡಿದೆ.

**KEYWORDS:** ಕನ್ನಡ ನಾಟಕ ಸಾಹಿತ್ಯ, ವೃತ್ತಿ ರಂಗಭೂಮಿ, ರಂಗಪ್ರಯೋಗ, ನವ್ಯ ನಾಟಕಕಾರರು, ರಂಗ ನಿರ್ದೇಶನ.

* **ಮಾರುತೇಶ ಕೆ.ಟಿ.,** ಸಂಶೋಧನಾರ್ಥಿ, ಡಾ.ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ.

** **ಡಾ. ಗೀತಾವಸಂತ,** ಪ್ರಾಧ್ಯಾಪಕರು, ಡಾ.ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ.

**ನಾಟಕ ಸಾಹಿತ್ಯ:**

ಭಾರತೀಯ ರಂಗಭೂಮಿ ಪರಂಪರೆಗಳಲ್ಲಿ ನಾಟಕದ ಉಗಮವು ಪ್ರಾಚೀನತೆಯಿಂದ ಕೂಡಿದೆ. ಕ್ರಿ.ಪೂ. 15 ರ ಸುಮಾರಿನಲ್ಲಿ ರಚಿತವಾದ ಪತಂಜಲಿಯ 'ಮಹಾಭಾಷ್ಯ' ಮತ್ತು ಭರತ ಮುನಿಯ 'ನಾಟ್ಯಶಾಸ್ತ್ರ' ಕೃತಿಗಳಲ್ಲಿ ನಾಟಕದ ಬಗೆಗೆ ಸ್ಪಷ್ಟ ಉಲ್ಲೇಖವಿದೆ. ಸುಮಾರು ಎರಡು ಸಾವಿರ ವರ್ಷಗಳಿಂದಲೂ ನಮ್ಮಲ್ಲಿ ನಾಟಕ ಪ್ರಕಾರವಿದೆ ಎಂಬುದನ್ನು ವಿದ್ವಾಂಸರು ತಿಳಿಸಿದ್ದಾರೆ. ಭರತನ ನಾಟ್ಯಶಾಸ್ತ್ರ ಕೃತಿಯು ನಾಟಕ ಕಲೆಯ ಬಗೆಗೆ ದೊರೆಯುವ ಅತೀ ಪ್ರಾಚೀನ ಕೃತಿಯಾಗಿದೆ. ಇದು ನಾಟಕವನ್ನು ಕುರಿತು ಅತ್ಯಂತ ಶಾಸ್ತ್ರೀಯವಾಗಿ ಚರ್ಚಿಸಿರುವ ಕೃತಿ. ಹಾಗಾಗಿ ಭರತನ ಪೂರ್ವದಲ್ಲಿಯೇ ನಾಟಕ ಪ್ರಕಾರವನ್ನು ಕಾಣಬಹುದು. ಸಂಸ್ಕೃತವು ನಾಟಕ ಕಲೆಯನ್ನು ಒಳಗೊಳ್ಳುತ್ತಿದ್ದಂತೆಯೇ ಇತರ ಭಾರತೀಯ ಭಾಷೆಗಳಲ್ಲಿಯೂ ನಾಟಕ ಪ್ರಕಾರವು ಮೈದಳೆಯಿತು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾಟಕವು ಶ್ರೀಮಂತ ಪ್ರಕಾರವಾಗಿದೆ. ಕ್ರಿ.ಶ. 1680 ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನ ಕವಿ ಸಿಂಗರಾರ್ಯನು ಶ್ರೀಹರ್ಷನ ಸಂಸ್ಕೃತದ 'ರತ್ನಾವಳಿ' ನಾಟಕವನ್ನು 'ಮಿತ್ರಾವಿಂದ ಗೋವಿಂದ' ಎಂಬ ಹೆಸರಿನಿಂದ ಅನುವಾದಿಸಿದ್ದಾನೆ ಇದು ಕನ್ನಡದ ಮೊದಲ ನಾಟಕವೆಂದು ತಿಳಿದು ಬರುತ್ತದೆ.

1860–80 ದಶಕದಲ್ಲಿ ಮರಾಠಿ– ಪಾರ್ಸಿ ಕಂಪನಿಗಳ ನಾಟಕಗಳು ಇಡೀ ಕರ್ನಾಟಕ ತುಂಬ ಸಂಚರಿಸಿ ಪ್ರದರ್ಶನಗೊಂಡು ಕರ್ನಾಟಕ ರಂಗಸಂಗೀತ, ರಂಗಪರಿಕರಗಳ ಮೇಲೆ ಪ್ರಭಾವ ಬೀರಿದವು. ಇದರಿಂದ "ಕನ್ನಡ ರಂಗಭೂಮಿ ಪುನರುಜ್ಜೀವನಕ್ಕೆ ಶಾಂತಕವಿಗಳು ಇದರ ಮುಂದಾಳತ್ವ ವಹಿಸಿದರು, ಗದಗಿನ ಶ್ರೀಮಂತ ಕುಟುಂಬದ ಲಚ್ಚಪ್ಪ ನಾಯಕ ಎನ್ನುವವರು ಶಾಂತಕವಿಗಳ ಪ್ರೋತ್ಸಾಹದಿಂದ 'ಗದಗಿನ ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ' ಯನ್ನು ಹಲವು ಯುವಕರ ನೆರವಿನಿಂದ ಪ್ರಾರಂಭಿಸಿದರು. ಕ್ರಿ.ಶ.1872 ರಲ್ಲಿ ಹುಟ್ಟಿಕೊಂಡ ನಾಟಕ ಮಂಡಳಿಯೇ ಉತ್ತರ ಕರ್ನಾಟಕದ ಪ್ರಥಮ ವೃತ್ತಿ ನಾಟಕ ಸಂಸ್ಥೆಯಾಗಿದ್ದು." ಶಾಂತಕವಿಗಳು ಇದೇ ಕಂಪನಿಗೆಂದೆ 'ಉಷಾಹರಣ, ಶ್ರೀಯಾಳ ಸತ್ವ ಪರೀಕ್ಷೆ, ಕೀಚಕನ ವಧೆ, ಸುಧನ್ವ ವಧೆ, ಸೀತಾರಣ್ಯ ಪ್ರವೇಶ, ಮುಂತಾದ ನಾಟಕಗಳನ್ನು ರಚಿಸಿಕೊಟ್ಟರು. ಅಂದಿನ ಮರಾಠಿ ಮತ್ತು ಕನ್ನಡ ವೃತ್ತ ಪತ್ರಿಕೆಗಳು ಈ ನಾಟಕಗಳನ್ನು ವಿಶೇಷವಾಗಿ ಹೊಗಳಿದವು.

"ಶಾಂತಕವಿಗಳ ಕಂಪನಿ ನಾಟಕಗಳನ್ನು ನೋಡಿದ ಚಾಮರಾಜೇಂದ್ರ ಒಡೆಯರ್ ಮೈಸೂರು ಅರಮನೆಯಲ್ಲಿ ಕಲೆಯ ಪ್ರೋತ್ಸಾಹಿಸಲು ಆಸ್ಥಾನದಲ್ಲಿದ್ದ ಉತ್ತಮ ಕಲಾವಿದರನ್ನೆಲ್ಲಾ ಬಳಸಿಕೊಂಡು ಅವರಲ್ಲಿ ಕೆಲವರನ್ನು ಮುಂಬೈಗೆ ಕಳಿಸಿ ಅಲ್ಲಿನ ರಂಗಕಲೆ, ಪರದೆಗಳು, ವೇಷಭೂಷಣಗಳ ಬಗ್ಗೆ ತರಬೇತಿ ಕೊಡಿಸಿ 1881 ರಲ್ಲಿ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಎಂಬ ಹೆಸರಿನಿಂದ ರಂಗಭೂಮಿಗೆ ಭದ್ರವಾದ ಬುನಾದಿಯನ್ನು ಹಾಕಿದರು." ಇದರ ಸಲುವಾಗಿಯೇ ಹಲವು ಸಂಸ್ಕೃತ ಮತ್ತು ಇಂಗ್ಲೀಷ್ ನಾಟಕಗಳು ಕನ್ನಡ ಅನುವಾದಗೊಂಡವು. 1883ರಲ್ಲಿ ಬಸಪ್ಪಶಾಸ್ತ್ರಿಗಳು ಅನುವಾದಿಸಿದ ಕಾಳಿದಾಸನ 'ಶಾಕುಂತಲ'ದಿಂದ ಮೊದಲುಗೊಂಡು ಸೋಸಲೆ ಅಯ್ಯಾಶಾಸ್ತ್ರಿ, ನಂಜನಗೂಡು ಸುಬ್ಬಾಶಾಸ್ತ್ರಿ, ಜಯರಾಯಾಚಾರ್ಯರು ಮುಂತಾದ ವಿದ್ವಾಂಸರು ಹಲವು ಉತ್ತಮ ನಾಟಕಗಳನ್ನು ಅನುವಾದಿಸಿದರು.

1884 ರಲ್ಲಿ ಗುಬ್ಬಿ ಕಂಪನಿ ಸ್ಥಾಪನೆಯಾಯಿತು. ಈ ಕಂಪನಿಯು ತುಮಕೂರು ಜಿಲ್ಲೆಯ ಗುಬ್ಬಿಯ ಕಲಾಭಿಮಾನಿಗಳು ನಾಟಕ ಸಂಘವನ್ನು ಆರಂಭಿಸಿ ಮೊದಲ ನಾಟಕವಾಗಿ

'ಕುಮಾರ ರಾಮನ ಕಥೆ'ಯನ್ನು ಪ್ರದರ್ಶಿಸಿದರು. "1920ರ ಹೊತ್ತಿಗೆ ಈ ಗುಬ್ಬಿ ಕಂಪನಿಯ ಪೂರ್ಣ ಮಾಲಿಕತ್ವವನ್ನು ಪಡೆದ ವೀರಣ್ಣನವರು ಮುಂದೆ ಮೂರು ದಶಕಗಳ ಕಾಲ ಕನ್ನಡ ರಂಗಭೂಮಿಯ ಕೇಂದ್ರ ವ್ಯಕ್ತಿಯಾಗಿ ಅದ್ವಿತೀಯ ಪ್ರಯೋಗ ಪಟುವಾಗಿ ಮೆರೆದರು. ಪೌರಾಣಿಕ ನಾಟಕಗಳನ್ನು ಹೆಚ್ಚಾಗಿ ಪ್ರಯೋಗಿಸುತ್ತಿದ್ದ ಗುಬ್ಬಿ ಕಂಪನಿಯಲ್ಲಿ ಮೊದಲು ವೀರಪ್ಪ ಶಾಸ್ತ್ರಿ, ಬಳಿಕ ಬೆಳ್ಳಾವೆ ನರಹರಿ ಶಾಸ್ತ್ರಿ, ಬಿ. ಪುಟ್ಟಸ್ವಾಮಯ್ಯನವರು ನಾಟಕಕಾರರಾಗಿ ಕಂಪನಿ ಕೀರ್ತಿಯನ್ನು ಹೆಚ್ಚಿಸಿದರು. ಇವರಲ್ಲದೆ ಬೇರೆ ನಾಟಕಕಾರರಿಂದಲೂ ಕೆಲವು ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ಈ ಕಂಪನಿ ಪಡೆಯಿತು. 'ಸಾಹುಕಾರ', 'ಅಡ್ಡದಾರಿ', 'ಕಾಲಚಕ್ರ', 'ಅಣ್ಣ–ತಮ್ಮ' ಮುಂತಾದ ಕೆಲವು ಸಾಮಾಜಿಕ ನಾಟಕಗಳನ್ನು ಗುಬ್ಬಿ ಕಂಪನಿ ಪ್ರದರ್ಶಿಸಿತಾದರೂ ಪೌರಾಣಿಕ ನಾಟಕಗಳೇ ಈ ಕಂಪನಿಯ ವೈಶಿಷ್ಟ್ಯತೆ. 'ಸದಾರಮೆ', 'ಗುಲೇಬಕಾವಲಿ'ಯಂತಹ ಮನರಂಜನಾ ಪ್ರಧಾನ ನಾಟಕವಾಗಿದೆ. ಶ್ರೀಕೃಷ್ಣಲೀಲಾ, ಕಂಸವಧೆ, ಮಾರ್ಕಂಡೇಯ, ಕುರುಕ್ಷೇತ್ರ, ಉಷಾ ಸ್ವಯಂವರ, ದಶಾವತಾರ ದಂತಹ ಪೌರಾಣಿಕ ನಾಟಕಗಳು. 'ಕರ್ನಾಟಕ ಸಾಮ್ರಾಜ್ಯ', 'ಸ್ವಾಮಿ ನಿಷ್ಠೆ', 'ಮಹಾತ್ಮ ಕಬೀರ್', ಅಕ್ಕ ಮಹಾದೇವಿಯಂತಹ ಐತಿಹಾಸಿಕ ನಾಟಕಗಳೂ ಈ ಕಂಪನಿಯವರ ಕೆಲವು ಜನಪ್ರಿಯ ನಾಟಕಗಳು." ಹೀಗೆ ಸರಿ ಸುಮಾರು ಐದು– ಆರು ದಶಕಗಳ ಕಾಲ ನೂರಾರು ನಾಟಕಗಳನ್ನು ಸಾವಿರಾರು ಕಲಾವಿದರೊಂದಿಗೆ ದೇಶದ ಮೂಲೆ–ಮೂಲೆಯಲ್ಲಿ ಪ್ರದರ್ಶನಗೊಂಡು ಕನ್ನಡ ರಂಗಭೂಮಿ ಇತಿಹಾಸದಲ್ಲಿ ಮತ್ತು ನಾಟಕ ಸಾಹಿತ್ಯದಲ್ಲಿ ತನ್ನದೇ ಆದ ಶಾಶ್ವತವಾದ ಹೆಸರು ಪಡೆದಿದೆ.

ಈ ಮೇಲ್ಕಂಡ ನಾಟಕ ಕಂಪನಿಗಳು ಅಷ್ಟೇ ಅಲ್ಲದೇ 1880ರಲ್ಲಿ ಸ್ಥಾಪಿತವಾದ 'ಶ್ರೀ ಶಾಕುಂತಲಾ ಕರ್ನಾಟಕ ನಾಟಕ ಸಭಾ, ಮೈಸೂರು. ಈ ಕಂಪನಿಯು ಸಿ.ಆರ್ ರಘುನಾಥರಾಯರ ನೇತೃತ್ವದಲ್ಲಿ ಮೈಸೂರು ಪ್ರಾಂತ್ಯದ ಕಲಾರಸಿಕರಿಗೆ ಮೊದಲ ಬಾರಿಗೆ ವೃತ್ತಿ ರಂಗಭೂಮಿಯ ಅನುಭೂತಿ ನೀಡಿತು. ಎರಡೇ ವರ್ಷದಲ್ಲಿ ಅರಮನೆಯ ಕಲಾವಿದರ ಜೊತೆ ಸೇರಿ ಮತ್ತೆ 1917ರಲ್ಲಿ ಮತ್ತೆ ಪುನರ್ಜನ್ಮ ಪಡೆದು ಸುಮಾರು ಹತ್ತು ವರ್ಷಗಳ ಕಾಲ ಕನ್ನಡ ರಂಗಭೂಮಿಯಲ್ಲಿ ಅನೇಕ ನಾಟಕಗಳು ಪ್ರಯೋಗಗೊಂಡಿವೆ. "1881 ರಲ್ಲಿ ರಾಜಧಾನಿ ನಾಟಕ ಮಂಡಳಿ– ಮೈಸೂರು ಕಂಪನಿಯನ್ನು ಕನ್ನಡ ರಂಗಭೂಮಿಯ ಹಿರಿಯ ನಟರಲ್ಲಿ ಅಗ್ರಗಣ್ಯರಾದ ಮಂಡ್ಯ ರಂಗಾಚಾರ್ಯರು ಮತ್ತ ಅವರ ಗೆಳೆಯರೂ ಸೇರಿ ಸ್ಥಾಪಿಸಿದರು. ಈ ನಾಟಕ ಮಂಡಳಿ ಸಹಜವಾಗಿಯೇ ಮರಾಠಿ ಮತ್ತು ಪಾರ್ಸಿ ಕಂಪನಿಗಳಿಂದ ಸ್ಫೂರ್ತಿ ಪಡೆಯಿತು. ಕೇವಲ ಸಾರ್ವಜನಿಕರ ಆಸರೆಯ ಬಲದ ಮೇಲೆ ಅಂದು ಬದುಕಿ ಉಳಿದಿದ್ದು ನಿಜಕ್ಕೂ ಆಶ್ಚರ್ಯಕರ ಸಂಗತಿಯಾಗಿದೆ. ಶ್ರೀನಿವಾಸಯ್ಯಂಗಾರರ 'ರತ್ನಾವಳಿ', 'ಸತ್ಯವರ್ಮ', 'ಹರಿಶ್ಚಂದ್ರ'. ಎಸ್.ಜಿ. ನರಸಿಂಹಾಚಾರ್ಯರ 'ಶಾಕುಂತಲ', 'ಚಂದ್ರಹಾಸ', 'ಕಾಮಪಾಲ ಚರಿತ'. ಎ. ಆನಂದರಾಯರ 'ರಾಮವರ್ಮ ಲೀಲಾವತಿ'. ಮಾದಪ್ಪ ಶಾಸ್ತ್ರಿಗಳ 'ಮಕರಂದಿಕಾ ಪರಿಣಯ' ಮೊದಲಾದವರು ಅಭಿನಯಿಸಿದ ಪ್ರಮುಖ ನಾಟಕಗಳಾಗಿವೆ". ಮತ್ತೊಂದು ಪ್ರಮುಖ ನಾಟಕ ತಂಡ 1902ರಲ್ಲಿ ಸ್ಥಾಪನೆಯಾದ ರತ್ನಾವಳಿ ನಾಟಕ ಸಭಾ– ಮೈಸೂರು. ಇದರ ಮುಖ್ಯಸ್ಥರಾದ ವರದಾಚಾರ್ಯ ಇವರು ಈ ನಾಟಕ ಕಂಪನಿಯಲ್ಲಿ ಪ್ರದರ್ಶನದ ಜೊತೆಗೆ ರಂಗರಚನೆಯ ಕಾರ್ಯಾಗಾರಗಳಿಗೆ ಹೆಚ್ಚು ಹೊತ್ತು ಕೊಡುತ್ತಿದ್ದರು. ಇನ್ನೂ ಪ್ರಮುಖವಾದ ನಾಟಕ ಮಂಡಳಿಗಳೆಂದರೆ 1874ರಲ್ಲಿ ಸ್ಥಾಪಿತವಾದ ಹಲಸಗಿ ನಾಟಕ ಮಂಡಳಿ. 1873 ಗದಗಿನಲ್ಲಿ ಜನ್ಮ ತಾಳಿದ ಕರ್ನಾಟಕ ನಾಟಕ ಕಂಪನಿ–ಗದಗ. 1904 ಶಿರಹಟ್ಟಿ ವೆಂಕೋಬರಾಯರು ಸ್ಥಾಪಿಸಿದ ಮಹಾಲಕ್ಷ್ಮೀ ನಾಟಕ ಮಂಡಳಿ–ಶಿರಹಟ್ಟಿ.

1914ರಲ್ಲಿ ವಿಶ್ವಗುಣಾದರ್ಶ ನಾಟಕ ಮಂಡಳಿ– ರಾಣಿಬೆನ್ನೂರು. 1911ರಲ್ಲಿ ಲಿಂಗನಗೌಡ ಪಾಟೀಲ್‌ರು ಕಟ್ಟಿದ ಶ್ರೀ ಹಾಲಸಿದ್ದೇಶ್ವರ ಪ್ರಾಸಾದಿತ ಸಂಗೀತ ನಾಟಕ ಸಭಾ–ಹಲಗೇರಿ. 1916ರಲ್ಲಿ ನಟ ಹಾಗೂ ನಾಟಕಗಾರ ಗರೂಡ ಸದಾಶಿವರಾಯರು ಸ್ಥಾಪಿಸಿದ ದತ್ತಾತ್ರೇಯ ನಾಟಕ ಮಂಡಳಿ–ಗದಗ. 1895ರಲ್ಲಿ ರಾಘವೇಂದ್ರ ರಾಯ ಆರಂಭಿಸಿದ ಶ್ರೀ ಕಂಠೇಶ್ವರ ಕರ್ನಾಟಕ ನಾಟಕ ಸಭಾ. 1883ರಲ್ಲಿ ಪೆರಿಸ್ವಾಮಿ ಅಯ್ಯಂಗಾರ್ 1883ರಲ್ಲಿ ರಸಿಕ ಮನಸೋಲ್ಲಾಸಿನಿ ನಾಟಕ ಸಭಾ ಸ್ಥಾಪಿಸಿದರು. ಮಳವಳ್ಳಿ ಸುಬ್ಬಣ್ಣನವರು 1900ರಲ್ಲಿ ಯಳಂದೂರು ನಾಟಕ ಮಂಡಳಿ ಸ್ಥಾಪಿಸಿದರು. ಒಟ್ಟಾರೆಯಾಗಿ ಈ ಎಲ್ಲಾ ಕಂಪನಿ ಅಥವಾ ಮಂಡಳಿಗಳಲ್ಲಿ ರಚಿಸಲ್ಪಟ್ಟ ನಾಟಕ ಮತ್ತು ಪ್ರಯೋಗಗಳೆಂದರೆ “ಶಾಕುಂತಲ, ರತ್ನಾವಳಿ, ಗಯಚರಿತ್ರೆ, ವಿರಾಟಪರ್ವ, ರಾಜಸೂಯ, ಮನ್ಮಥ ವಿಜಯ, ಸದಾರಮೆ, ಬಕಾವಲಿ, ರಾಮಾಂಜನೇಯಯುದ್ಧ, ಹರಿಶ್ಚಂದ್ರ, ನಿರುಪಮ, ಕಾಳಿದಾಸ, ಶನಿ ಪ್ರಭಾವ, ಪ್ರಭಾಮಣಿ, ಲಂಕಾದಹನ, ಪ್ರಭಾವತಿ ಪರಿಣಯ, ಸುಭದ್ರಾ ಕಲ್ಯಾಣ, ಸೀತಾ ಕಲ್ಯಾಣ, ಶ್ರೀಕೃಷ್ಣಲೀಲಾ, ಭಕ್ತ ಕಬೀರ್, ರಾಮವರ್ಮ ಲೀಲಾವತಿ, ಶೂರಸೇನ, ರಾಜಭಕ್ತ, ಕರ್ನಾಟಕ ಸಾಮ್ರಾಜ್ಯ, ಸ್ವಾಮಿನಿಷ್ಠೆ, ಕಂಸವಧೆ, ವಿಷ್ಣುಲೀಲಾ, ಪ್ರಹ್ಲಾದ ಚರಿತ್ರೆ, ಆಶಾನಿರಾಶ, ಷಹಜಾನ್, ಸಂಸಾರ ನೌಕ, ಕುರುಕ್ಷೇತ್ರ, ದಾನಶೂರ ಕರ್ಣ, ಭೀಷ್ಮ ಪ್ರತಿಜ್ಞೆ, ಅಭಿಮನ್ಯು, ಭೂಕೈಲಾಸ, ಅಕ್ಕಮಹಾದೇವಿ, ವಿಷಮ ವಿವಾಹ, ಎಚ್ಚಮ ನಾಯಕ. ಈ ನಾಟಕಗಳು 1880 ರಿಂದ 1950 ರವರೆಗೆ ರಚಿಸಲ್ಪಟ್ಟ ಮತ್ತು ಪ್ರಯೋಗಗೊಂಡ ನಾಟಕಗಳಾಗಿವೆ.”

ಎರಡನೇ ಹಂತ ಪ್ರಾರಂಭವಾಗುವುದು 1926ರಲ್ಲಿ ಬಿ.ಎಂ.ಶ್ರೀ ಅವರು ‘ಗದಾಯುದ್ಧ ನಾಟಕಂ’, ‘ಅಶ್ವತ್ಥಾಮನ್’, ‘ಪಾರಸಿಕರು’ ಎಂಬ ಮೂರು ಗ್ರೀಕ್ ರುದ್ರನಾಟಕಗಳನ್ನು ಅನುವಾದಿಸಿದರು. ಆದರೆ 1919 ರಲ್ಲಿ ಟಿ.ಪಿ.ಕೈಲಾಸಂ, ಸಂಸ ಮತ್ತು ಶ್ರೀರಂಗರು. ಮೂರು ಜನ ನಾಟಕಗಾರರು ಒಟ್ಟಿಗೆ ಕಾಣಿಸಿಕೊಳ್ಳುತ್ತಾರೆ ಮೂಲಕ ಕನ್ನಡಕ್ಕೆ ಸ್ವತಂತ್ರ ನಾಟಕಗಳು ಬಂದವು. 1919ರಲ್ಲಿ ಎ.ಡಿ.ಎ ಸಂಸ್ಥೆಯವರು ಏರ್ಪಡಿಸಿದ್ದ ಕನ್ನಡ ನಾಟಕ ಸ್ಪರ್ಧೆಯಲ್ಲಿ ಕೈಲಾಸಂರವರ ‘ಟೊಳ್ಳುಗಟ್ಟಿ’ ಬಹುಮಾನಗಳಿಸಿತ್ತು ಅಲ್ಲಿಂದ ಅವರು ಆಧುನಿಕ ಕನ್ನಡ ನಾಟಕದ ಪ್ರಹಸನದ ಪ್ರವರ್ತಕರಾದರು. ಕೈಲಾಸಂರವರ ಉತ್ತಮ ನಾಟಕಗಳ ಗುರಿ ಕೇವಲ ನಗೆಯಲ್ಲ. ಪ್ರಧಾನವಾಗಿ ಹಾಸ್ಯವನ್ನೇ ಗುರಿಯಾಗಿಸಿಕೊಂಡಿರುವ ‘ನಮ್‌ಕ್ಲಬ್’, ‘ಅನುಕೂಲಕೊಬ್ಬಣ್ಣ’, ‘ಸತ್ತವರ ಸಂತಾಪ’ದಂತಹ ನಾಟಕಗಳೂ, ವಿಡಂಬನಾತ್ಮಕ ಪ್ರಹಸನಗಳಾದ ‘ನಮ್ ಕಂಪ್ನಿ’, ‘ಬಡ್ವಾಳಿಲ್ಲದ ಬಡಾಯಿ’, ‘ವೈದ್ಯನ ವ್ಯಾಧಿ’ ನಾಟಕಗಳು ಹೊರತು ಪಡಿಸಿದರೆ. ಉಳಿದ ಎಲ್ಲಾ ನಾಟಕಗಳೂ ಹಾಸ್ಯದ ಹೊದಿಕೆ ಇರುವ ಗಂಭೀರ ವಸ್ತುಗಳಾಗಿವೆ. ‘ಸೂಳೆ’, ‘ಪೋಲಿಕಿಟ್ಟಿ’ ನಾಟಕಗಳಲ್ಲಿ ವಿಷಾದವೇ ಸ್ಥಾಯಿಯಾಗಿದೆ. ಕೈಲಾಸಂರವರಿಗೆ ಸರಿಸಮಾನವಾಗಿ ನಾಟಕಗಳ ಕಟ್ಟಿದ ಮತ್ತೊಬ್ಬ ಚಾರಿತ್ರಿಕ ನಾಟಕಗಾರ ಸಂಸ. ಇವರು ಒಟ್ಟು 23 ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕಗಳನ್ನು ಓದಿದ ಓದುಗರು ಮಹಾಕಾವ್ಯವೇ ಓದಿದ ಹಾಗೆ ಅನ್ನಿಸುತ್ತದೆ ಎಂದು ಪ್ರಶಂಸಿಸಿದ್ದು ಉಂಟು ವಿಮರ್ಶಿಸಿದ್ದಾರೆ. ಎಲ್ಲಾ ನಾಟಕಗಳನ್ನು ಹಳೇ ಮೈಸೂರಿನ ಭಾಷೆಯಲ್ಲಿ ಇದ್ದು. ಬದುಕಿನ ದುರಂತದಿಂದ ಮಾನಸಿಕವಾಗಿ ಖಿನ್ನತೆಗೆ ಒಳಪಟ್ಟು ತನ್ನ ನಾಟಕಗಳನ್ನು ಸುಟ್ಟು ಹಾಕಿದ್ದಾರೆ ಎಂದು ಚರಿತ್ರೆಗಳು ತಿಳಿಸುತ್ತವೆ. ಉಳಿದ ಪ್ರಮುಖ ನಾಟಕಗಳೆಂದರೆ ‘ಸುಗುಣ ಗಂಭೀರ’, ‘ಬಿರುವದೆಂಬರ ಗಂಡ’, ‘ಮಂತ್ರಶಕ್ತಿ’, ‘ಬೆಟ್ಟದ ಅರಸು’, ‘ವಿಗಡವಿಕ್ರಮರಾಯ’, ‘ವಿಜಯ ನರಸಿಂಹ’ ಆಗಿವೆ. ಇವರ ಬದುಕಿನ ದುರಂತವೇ ನಾಟಕೀಯತೆಯಿಂದ ಕೂಡಿರುವುದರಿಂದ ಸಂಸರ ಬದುಕಿನ ಪ್ರಭಾವದಿಂದ ಕೀ.ರಂ ನಾಗರಾಜು ‘ನೀಗಿಕೊಂಡ ಸಂಸ’, ಪ್ರಸನ್ನ ‘ಹುತ್ತವ

ಬಡಿದರೆ' ನಾಟಕ ರಚಿಸಿದ್ದಾರೆ. ಕೇವಲ ನಾಟಕ ರಚನೆಯ ಜೊತೆ ಶಾಸ್ತ್ರೀಯವಾಗಿ ರಂಗಶಿಕ್ಷಣವಾಗಬೇಕೆಂದು ದೇಶದ ಮುಖ್ಯ ರಂಗಶಿಕ್ಷಣ ಸಂಸ್ಥೆಯಾದ ಎನ್.ಎಸ್.ಡಿ.ಯಲ್ಲಿ ರಂಗ ಉಪನ್ಯಾಸಗಳನ್ನು ನೀಡುತ್ತಾ ಕನ್ನಡ ರಂಗಭೂಮಿಗೆ ಭರತನ 'ನಾಟ್ಯಶಾಸ್ತ್ರ'ವನ್ನು ಕನ್ನಡಕ್ಕೆ ಅನುವಾದಿಸಿದವರು ಶ್ರೀರಂಗರು. ಶ್ರೀರಂಗರು 65 ಏಕಾಂಕಗಳನ್ನು ಒಳಗೊಂಡ 111 ನಾಟಕಗಳನ್ನು ಬರೆದಿದ್ದಾರೆ. ಅವರ ಪ್ರಮುಖ ನಾಟಕಗಳೆಂದರೆ 'ಶೋಕಚಕ್ರ', 'ಕತ್ತಲೆ–ಬೆಳಕು', 'ಕೇಳು ಜನಮೇಜಯ'. ಇವರ 'ಕಾಳಿದಾಸ' ವಿಮರ್ಶಾ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ.

ಕುವೆಂಪುರವರು ಪುರಾಣದ ಕಥೆಗಳ ಮೂಲಕ ಆಧುನಿಕ ಪರಿಸರವನ್ನು ನೋಡುವ ಬಗೆ ಅಥವಾ ಆಧುನಿಕ ಸಮಸ್ಯೆಗಳನ್ನು ಪುರಾಣದ ಕಥೆಯಲ್ಲಿ ಪ್ರಶ್ನಿಸುವ, ಚರ್ಚಿಸುವ ವೈಚಾರಿಕ ಪ್ರಜ್ಞೆ ಮೂಡಿಸಿದರು. 'ಬೆರಳ್ ಕೊರಳ್', 'ಸ್ಮಶಾನ ಕುರುಕ್ಷೇತ್ರ', 'ಶೂದ್ರತಪಸ್ವಿ' ನಾಟಕಗಳು ಬರೆದು 80–90 ವರ್ಷಗಳಾದರೂ ಪ್ರಸ್ತುತವೂ ಸಹ ರಂಗಪ್ರಯೋಗಗಳು ಯಶಸ್ವಿಯಾಗುತ್ತಿದೆ. ಶೂದ್ರತಪಸ್ವಿ ಬರೆದಾಗ ಅಂತೂ ಕುವೆಂಪು ಮತ್ತು ಮಾಸ್ತಿಯವರ ನಡುವೆ ನಡೆದ ಚರ್ಚೆ ಕನ್ನಡ ರಂಗಭೂಮಿ ಮತ್ತು ಸಾಹಿತ್ಯದ ಇತಿಹಾಸದಲ್ಲೇ ದಾಖಲೆಯಾಗಿ ಉಳಿದಿದೆ. 'ಯಮನ ಸೋಲು', 'ಜಲಗಾರ', 'ರಕ್ತಾಕ್ಷಿ', 'ಚಂದ್ರಹಾಸ', 'ಬಿರುಗಾಳಿ' ಹೆಚ್ಚು ರಂಗ ಪ್ರಯೋಗಗೊಂಡ ನಾಟಕಗಳು. 'ಕಿಂದರಿಜೋಗಿ' ಮಕ್ಕಳ ನಾಟಕ ಪ್ರಮುಖವಾದುದ್ದು. ಮಾಸ್ತಿಯವರ 'ಯಶೋಧರಾ' ನಾಟಕ ಸಿದ್ದಾರ್ಥನ ಕಥಾವಸ್ತುವಾಗಿದೆ. ಇವರ ಪ್ರಮುಖ ನಾಟಕವೆಂದರೆ 'ಕಾಕನ ಕೋಟೆ' ಈ ನಾಟಕವು ಚಾರಿತ್ರಿಕ ನಾಟಕ ಮಾತ್ರವಾಗಿರದೆ. ಬುಡಕಟ್ಟು ಕಥಾವಸ್ತು ಒಳಗೊಂಡ ಕನ್ನೇ ಮೊದಲ ನಾಟಕವೆಂದು ಹೇಳಬಹುದು. ಡಿ.ವಿ ಗುಂಡಪ್ಪ ಅವರ 'ಪರಶುರಾಮ', ಮ್ಯಾಕ್‌ಬೆತ್, ಗೀತಾ ಶಾಕುಂತಲ, ಭಸ್ಮಾಸೂರ ನಾಟಕಗಳನ್ನು ಬರೆದಿದ್ದಾರೆ. ಗೀತ ನಾಟಕಗಳಿಗೆ ಹೊಸ ಭಾಷ್ಯವನ್ನು ಬರೆದವರು ಪು.ತಿ.ನ ರವರು ಇವರು 23 ಗೀತ ನಾಟಕಗಳನ್ನು ಬರೆದಿದ್ದಾರೆ. ಇವರ ಗೀತನಾಟಕದ ಶೈಲಿ ಪಾಶ್ಚಾತ್ಯರ ಒಪೆರಾ ತತ್ವರೂಪವಾಗಿದೆ. ಇವರ ಪ್ರಸಿದ್ಧ ಪಡೆದ ಗೀತನಾಟಕಗಳೆಂದರೆ ಆಧುನಿಕತೆಯ ನಾಗರಿಕತೆಯನ್ನು ಪ್ರಶ್ನಿಸುವ ಹಾಗೂ ಕೇಡಿನ ಕರೆಗೆ ಮಾನವ ಸಂಕುಲ ಹೋಗುವ ಅಥವಾ ನಿರ್ಗಮನಿಸುವ ನಾಟಕ 'ಗೋಕುಲ ನಿರ್ಗಮನ'. ಅಹಲ್ಯೆ' ಸಹ ಪ್ರಮುಖ ನಾಟಕವಾಗಿದೆ. ಇವರ 'ಹಂಸದಮಯಂತಿ ಮತ್ತು ಇತರ ರೂಪಕಗಳು' ನಾಟಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವುದು ಶ್ಲಾಘನೀಯವಾದದ್ದು. ಶಿವರಾಮ ಕಾರಂತರು 20 ನಾಟಕಗಳನ್ನು ಬರೆದಿದ್ದು ಅವರ ನಾಟಕ ಪ್ರಕಾರವು ಅವರ ಕಾದಂಬರಿಯಂತೆ ಹೆಚ್ಚು ಜನಮನ್ನಣೆ ಪಡೆಯಲಿ ಆದರೆ ಅವರು ಕನ್ನಡ ರಂಗಭೂಮಿ ಅಥವಾ ಸಾಹಿತ್ಯಲೋಕಕ್ಕೆ ಕೊಟ್ಟ 'ಯಕ್ಷಗಾನ–ಬಯಲಾಟ' ಕೃತಿಯು ಅದ್ವಿತೀಯವಾದದ್ದು. ಅವರ ಪ್ರಮುಖ ನಾಟಕಗಳೆಂದರೆ 'ಮುಕ್ತದ್ವಾರ', 'ಬೌದ್ಧಯಾತ್ರಾ', 'ನಾರದ ಗರ್ವಭಂಗ', 'ಗರ್ಭಗುಡಿ', 'ಕೀಚಕ ಸೈರಂಧ್ರಿ', 'ಕರ್ಣಾರ್ಜುನ' ಇತ್ಯಾದಿಗಳಾಗಿವೆ. ಅತ್ಯಂತ ಕಡಿಮೆ ನಾಟಕಗಳನ್ನು ಬರೆದು, ಗಿರೀಶ್ ಕಾರ್ನಾಡ್ ಅಂತ ನಾಟಕಗಾರರನ್ನು ಪ್ರೋತ್ಸಾಹಿಸುತ್ತಾ ನಾಟಕ ಕೃತಿಗಳನ್ನು ಪ್ರಕಟಿಸುತ್ತಿದ್ದವರು ಮನೋಹರ ಗ್ರಂಥಮಾಲೆ ಸ್ಥಾಪಕರಾದ ಜಿ.ಬಿ.ಜೋಶಿ ಇವರ ಜಡಭರತ ಹಾಗೂ ಅನಾಮಧೇಯ ಎಂಬ ಅಂಕಿತನಾಮದಿಂದ ನಾಟಕ ಬರೆದಿದ್ದಾರೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಕದಡಿದ ನೀರು', 'ಸತ್ತವರ ನೆರಳು'. ಸತ್ತವರ ನೆರಳು ನಾಟಕವು ಧರ್ಮ ಮತ್ತು ಮತ ಹೆಸರಿನಲ್ಲಿ ನಡೆಯುವ ಅರಾಜಕತೆಯನ್ನು ಬಿಚ್ಚಿಡುವ ನಾಟಕವಾಗಿದೆ.

1950–60ರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ನವ್ಯ ಕಾಲಘಟ್ಟ ಪ್ರಾರಂಭವಾಗಿ

ಹಾಗೂ ಪಾಶ್ಚಾತ್ಯ ಚಿಂತನೆಗಳಿಂದ ಪ್ರಭಾವಿತರಾಗಿ ಅನೇಕ ನಾಟಕಗಳು ಮತ್ತು ನಾಟಕಗಾರರು ಹುಟ್ಟಿಕೊಂಡರು. ಅವರಲ್ಲಿ ಪ್ರಮುಖರಾದವರೆಂದರೆ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಪಿ.ಲಂಕೇಶ್, ಚಂದ್ರಶೇಖರ ಪಾಟೀಲ್, ಚಂದ್ರಕಾಂತ ಕುಸನೂರು ಹೆಚ್.ಎಸ್. ಶಿವಪ್ರಕಾಶ್ ರವರೆಗೆ ಗುರುತಿಸಬಹುದು. ಸುಮತೀಂದ್ರ ನಾಡಿಗರ 'ಬೊಕ್ಕತಲೆಯ ನರ್ತಕಿ' ಕನ್ನಡ ಮೊದಲ ಅಸಂಗತ ನಾಟಕವಾಗಿದೆ. ಇದೆ ಪ್ರಕಾರದಲ್ಲಿ ಚಂದ್ರಕಾಂತ ಕುಸನೂರರು 'ವಿದೂಷಕ' ನಾಟಕ ಬರೆದರು.

ನಮ್ಮ ಕನ್ನಡ ರಂಗಭೂಮಿ ಮತ್ತು ಕನ್ನಡ ನಾಟಕ ಪರಂಪರೆಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ ಕೀರ್ತಿ ಗಿರೀಶ್ ಕಾರ್ನಾಡರಿಗೆ ಸಲ್ಲಬೇಕು. ಇವರ ನಾಟಕಗಳಾದ ಹಯವದನ, ನಾಗಮಂಡಲ ಜಾನಪದ ಶೈಲಿಯ ನಾಟಕವಿದ್ದು. ಪ್ರೇಮ– ಕಾಮದ ನಡುವಿನ ಸಂಕೀರ್ಣತೆಯ ಮನುಷ್ಯನ ಮಾನಸಿಕ ತೊಳಲಾಟದಲ್ಲಿ ಅವನ ಗುಣಾವಗುಣಗಳ ಸಂಕಷ್ಟದ ನಾಟಕೀಯತೆ ಕಟ್ಟಿಕೊಟ್ಟಿದ್ದಾರೆ. 'ತುಘಲಕ್', 'ಟಿಪ್ಪುವಿನ ಕನಸು', 'ರಕ್ಕಸತಂಗಡಿ', 'ತಲೆದಂಡ' ನಾಟಕಗಳು ಕೇವಲ ಚರಿತ್ರೆಯನ್ನು ಸೂಚಿಸದೆ ವರ್ತಮಾನದ ರಾಜಕೀಯಕ್ಕೆ ಹಿಡಿಯುವ ಕೈಗನ್ನಡಿಯಂತೆ ಈ ನಾಟಕಗಳು ಬಿಂಬಿಸುತ್ತವೆ. 'ಯಯಾತಿ', 'ಅಗ್ನಿ ಮತ್ತು ಮಳೆ', 'ಹಿಟ್ಟಿನ ಹುಂಜ' ನಾಟಕಗಳು ಮನುಷ್ಯನ ಮೂಲಭೂತ ಗುಣಗಳ ಕೇಡುಗಳ ಪ್ರಶ್ನಿಸುವ ನಾಟಕಗಳಾಗಿವೆ.

ಚಂದ್ರಶೇಖರ ಕಂಬಾರರು ಜಾನಪದೀಯ ಕಥಾವಸ್ತು ನಾಟಕಗಳ ಮೂಲಕ ವರ್ತಮಾನದ ಸಾಮಾಜಿಕ ಸಮಸ್ಯೆಗಳನ್ನು ರೂಪಕ, ಪ್ರತಿಮೆ ಮೂಲಕ ಕಟ್ಟಿಕೊಡುವ ನಾಟಕಗಾರ ಇವರ ಪ್ರಮುಖ ನಾಟಕಗಳೆಂದರೆ 'ಜೋಕುಮಾರಸ್ವಾಮಿ', 'ಸಂಗ್ಯಾ–ಬಾಳ್ಯಾ', 'ಬೆಪ್ಪತಕ್ಕಡಿ ಬೋಳೇಶಂಕರ', 'ಸಾಂಬಶಿವ ಪ್ರಹಸನ', 'ಸಿರಿಸಂಪಿಗೆ', 'ಹರಕೆಯ ಕುರಿ' ಇತ್ಯಾದಿಗಳಾಗಿವೆ.

ಪಿ ಲಂಕೇಶರ ಗುಣಮುಖ ನಾಟಕವು ಕ್ರಿ.ಶ 1688ರಿಂದ 1747 ರವರೆಗೆ ಬದುಕಿದ್ದ ನಾದಿರ್ ಶಾ ಬದುಕಿದ್ದ ಘಟನೆ ಆಧಾರಿತವಾಗಿದೆ. ಈ ನಾಟಕವು ಸಮಕಾಲೀನ ತುಮುಲಗಳನ್ನು ಅಭಿವ್ಯಕ್ತಿಗೊಳಿಸುವುದೇ ನಾಟಕಗಾರರ ಉದ್ದೇಶ ಎನ್ನಬಹುದು. ಗುಣಮುಖ ನಾಟಕದ ಒಂದು ಮನಸ್ಥಿತಿಗಳ ತಾಕಲಾಟವನ್ನು ಸಂಕೀರ್ಣ ನಿರೂಪಣೆಯೊಂದಿಗೆ ಚಿತ್ರಿಸಲ್ಪಟ್ಟಿದೆ. ಇವರ ಮತ್ತೊಂದು ಪ್ರಮುಖ ನಾಟಕವೆಂದರೆ 'ಸಂಕ್ರಾಂತಿ' ಪ್ರೇಮ–ಕಾಮ, ಶರಣ– ಡಾಂಬಿಕಭಕ್ತಿ, ಅರಾಜಕತೆಯನ್ನು ಒಳಗೊಂಡ ನಾಟಕವಾಗಿದೆ. ಪೋಲಿಸರಿದ್ದಾರೆ ಎಚ್ಚರಿಕೆ.?, ನನ್ನ ತಂಗಿಗೊಂದು ಗಂಡು ಕೊಡಿ, ಹ್ಯಾಮ್ಲೆಟ್, ದೊರೆ ಈಡಿಪಸ್ ಲಂಕೇಶ್‌ರ ಪ್ರಮುಖ ನಾಟಕಗಳು. ಇವರು 'ಪ್ರತಿಮಾ ರಂಗ' ಎಂಬ ರಂಗತಂಡ ಕಟ್ಟಿ ರಂಗಪ್ರಯೋಗಕ್ಕೂ ಸಾಧ್ಯತೆ ನೀಡಿದ್ದಾರೆ. ಹೆಚ್.ಎಸ್. ಶಿವಪ್ರಕಾಶ್ ರವರ 'ಮಹಾ ಚೈತ್ರ ನಾಟಕದಲ್ಲಿ ಕನ್ನಡ ನಾಡಿನ ಚರಿತ್ರೆ ಸಾಂಸ್ಕೃತಿಕ ಘಟ್ಟಗಳಲ್ಲಿ ಒಂದಾದ 12ನೇ ಶತಮಾನದ ಚಾರಿತ್ರಿಕ ರಾಜಕೀಯ ಆರ್ಥಿಕ ಸಾಮಾಜಿಕ ವೈಶಿಷ್ಟ್ಯಗಳನ್ನು ಅದಕ್ಕೆ ಸಂಬಂಧಿಸಿದ ಪುರಾಣ ಆಚರಣೆ ಜನಪದವನ್ನು ಬಹು ವಿಶಿಷ್ಟವಾಗಿ ಚಿತ್ರಿಸಿದ್ದಾರೆ.

**ಪ್ರಯೋಗಗಳು:**

ಬಿ.ವಿ. ಕಾರಂತ ಮನೆಯಿಂದ ಓಡಿಹೋಗಿ ಪೌರಾಣಿಕ ಗುಬ್ಬಿ ವೀರಣ್ಣ ನಾಟಕ ಕಂಪನಿಗೆ ಸೇರಿಕೊಂಡರು, ಅಲ್ಲಿ ಅವರು ಡಾ. ರಾಜ್‌ಕುಮಾರ್ ಅವರೊಂದಿಗೆ ಕೆಲಸ ಮಾಡಿದರು. "ಗುಬ್ಬಿ ವೀರಣ್ಣ ಬಿ.ವಿ. ಕಾರಂತರು 1962 ರಲ್ಲಿ ನವದೆಹಲಿಯಲ್ಲಿರುವ

ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್ಎಸ್ಡಿ) ದಲ್ಲಿ ಪದವಿಯನ್ನು ಪಡೆದರು. ಈ ಬಾರಿ 1977 ರಲ್ಲಿ ಅವರು ನಿರ್ದೇಶಕರಾಗಿದ್ದರು. ಎನ್ಎಸ್ಡಿ ಯ ನಿರ್ದೇಶಕರಾಗಿ, ಕಾರಂತರು ರಂಗಭೂಮಿಯನ್ನು ಭಾರತದ ದೂರದ ಮೂಲೆಗಳಿಗೆ ಕೊಂಡೊಯ್ದರು. ಅವರು ತಮಿಳುನಾಡಿನ ಮಧುರೈನಂತಹ ದೂರದ ಸ್ಥಳಗಳಲ್ಲಿ ಹಲವಾರು ಕಾರ್ಯಾಗಾರಗಳನ್ನು ನಡೆಸಿದರು. ಅವರು ಎನ್ಎಸ್ಡಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ನಂತರ, 1981 ಮತ್ತು 1986 ರ ನಡುವೆ ಮಧ್ಯಪ್ರದೇಶದ ಭಾರತ್ ಭವನದ ಅಧೀನದಲ್ಲಿ ರಂಗಮಂಡಲದ ರೆಪರ್ಟರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ನಂತರ, ಕಾರಂತರು ಕರ್ನಾಟಕಕ್ಕೆ ಮರಳಿದರು1989 ರಲ್ಲಿ ಕರ್ನಾಟಕದ ಮೈಸೂರಿನಲ್ಲಿ ರಂಗಾಯಣ ಎಂಬ ರೆಪರ್ಟರಿಯನ್ನು ಸ್ಥಾಪಿಸಿದರು. ಅವರ ಪ್ರವೇಶವು ಕನ್ನಡ ರಂಗಭೂಮಿಯಲ್ಲಿ ದೊಡ್ಡ ಬದಲಾವಣೆಯನ್ನು ತಂದಿತು, ಅದು ಹಳೆಯ, ಔಪಚಾರಿಕ ಪ್ರೊಸೆನಿಯಮ್ ಶೈಲಿಯಲ್ಲಿ ಮುಳುಗಿತು. 1970 ರ ದಶಕದ ಆರಂಭದಲ್ಲಿ ನಿರ್ದೇಶಿಸಿದ ಜೋಕುಮಾರ ಸ್ವಾಮಿ, ಸಂಕ್ರಾಂತಿ, ಹುಚ್ಚು ಕುದುರೆ ಮತ್ತು ಈಡಿಪಸ್ ಮುಂತಾದ ಅವರ ನಾಟಕಗಳು ಟ್ರೆಂಡ್‌ಸೆಟರ್‌ಗಳೆಂದು ಪ್ರಶಂಸಿಸಲ್ಪಟ್ಟವು. ಭಾಷೆ, ಸಂಗೀತ, ಹಾಡು, ಶೈಲೀಕರಣ ಮುಂತಾದ ರಂಗಭೂಮಿಯ ಎಲ್ಲ ಅಂಶಗಳನ್ನು ಈ ನಾಟಕಗಳು ಮುಟ್ಟಿದವು. ಸಂಗೀತದ ನವೀನ ಬಳಕೆಯು ರಂಗಭೂಮಿಗೆ ಕಾರಂತರ ದೊಡ್ಡ ಕೊಡುಗೆಯಾಗಿದೆ.'' ಕಾರಂತರ ಒಂದು ಸಾಮರ್ಥ್ಯವೆಂದರೆ ಶಾಸ್ತ್ರೀಯ, ಸಾಂಪ್ರದಾಯಿಕ ಮತ್ತು ಜಾನಪದ ರೂಪಗಳನ್ನು ಸೆಳೆಯುವ ಮತ್ತು ಅವರ ರಚನೆಗಳಲ್ಲಿ ಅವುಗಳನ್ನು ಬೆಸೆಯುವ ಸಾಮರ್ಥ್ಯ. ಜ್ಞಾನಪೀಠ ಪುರಸ್ಕೃತ ನಿರ್ಮಲ್ ವರ್ಮಾ ಒಮ್ಮೆ ಕಾರಂತರನ್ನು ''ಭಾರತೀಯ ರಂಗಭೂಮಿಯ ಅಧಿಕೃತ ದೇಸಿ ಪ್ರತಿಭೆ'' ಎಂದು ಬಣ್ಣಿಸಿದ್ದರು. ಬಿ. ವಿ.ಕಾರಂತರು ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದರು, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಕನ್ನಡದಲ್ಲಿ ಹಿಂದಿಯ ಹತ್ತಿರವಿದೆ. ಅವರು ಇಂಗ್ಲಿಷ್, ತೆಲುಗು, ಮಲಯಾಳಂ, ತಮಿಳು, ಪಂಜಾಬಿ, ಉರ್ದು, ಸಂಸ್ಕೃತ ಮತ್ತು ಗುಜರಾತಿ ನಾಟಕಗಳನ್ನು ನಿರ್ದೇಶಿಸಿದರು. ಹಯವದನ (ಗಿರೀಶ್ ಕಾರ್ನಾಡರಿಂದ), ಕತ್ತಲೆ ಬೆಳಕು, ಹುಚ್ಚು ಕುದುರೆ, ಏವಂ ಇಂದ್ರಜಿತ್, ಈಡಿಪಸ್, ಸಂಕ್ರಾಂತಿ, ಜೋಕುಮಾರ ಸ್ವಾಮಿ, ಸತ್ತವರ ನೆರಳು, ಹುತ್ತವ ಬಡಿದರೆ ಮತ್ತು ಗೋಕುಲ ನಿರ್ಗಮನ ಇವು ಕನ್ನಡದಲ್ಲಿ ಅವರ ಅತ್ಯಂತ ಜನಪ್ರಿಯ ನಾಟಕಗಳು. ಹಿಂದಿಯಲ್ಲಿ ನಿರ್ದೇಶಿಸಿದ ನಲವತ್ತು ಅಥವಾ ಅದಕ್ಕಿಂತ ಹೆಚ್ಚು ನಾಟಕಗಳಲ್ಲಿ, ಮ್ಯಾಕ್‌ಬೆತ್ (ಸಾಂಪ್ರದಾಯಿಕ ಯಕ್ಷಗಾನ ನೃತ್ಯ ನಾಟಕ ಪ್ರಕಾರವನ್ನು ಬಳಸಿ), ಕಿಂಗ್ ಲಿಯರ್, ಚಂದ್ರಹಾಸ, ಹಯವದನ, ಘಾಸಿರಾಮ್ ಕೊತ್ವಾಲ್, ಮೃಚ್ಛ ಕಟಿಕ, ಮುದ್ರಾ ರಾಕ್ಷಸ ಮತ್ತು ಮಾಳವಿಕಾಗ್ನಿ ಮಿತ್ರ ಕೆಲವು ಹೆಚ್ಚು ಜನಪ್ರಿಯವಾದವುಗಳು. ಕಾರಂತರು ಮಕ್ಕಳ ನಿರ್ದೇಶನದಲ್ಲಿಯೂ ತೊಡಗಿಸಿಕೊಂಡಿದ್ದಾರೆ ಮತ್ತು ''ಪಂಜರ ಶಾಲೆ'', ''ನೀಲಿ ಕುದುರೆ'', ''ಹೆದ್ದಾಯಣ'', ''ಅಳಿಲು ರಾಮಾಯಣ'' ಮತ್ತು ''ಕೃತಜ್ಞತೆಯ ಮನುಷ್ಯ'' ನಂತಹ ಹಲವಾರು ಮಕ್ಕಳ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಬಿ.ವಿ.ಕಾರಂತರ ನಾಟಕದ ಮುಖ್ಯ ಶಕ್ತಿ ಮತ್ತು ವೈಶಿಷ್ಟ್ಯರ ಪ್ರತಿಮೆಗಳೆಂದರೆ ಸಂಗೀತ. ಆ ಸಂಗೀತಕ್ಕೆ ಬಳಸುತ್ತಿದ್ದ ದೇಸಿ ವಾದ್ಯಗಳು ಸ್ವತಃ ಸಂಗೀತ ಸಂಯೋಜಕರಾಗಿದ್ದ ಬಿ.ವಿ. ಕಾರಂತರು. ಗೋಕುಲ ನಿರ್ಗಮನ, ಮೂಕನ ಮಕ್ಕಳು, ಸತ್ತವರ ನೆರಳು, ಹಯವದನ, ಚಂದ್ರಹಾಸ, ಪಂಜರ ಶಾಲೆ, ಇತ್ಯಾದಿ ಅನೇಕ ನಾಟಕಗಳಿಗೆ ತಮ್ಮ ಸಂಗೀತದ ಮಟ್ಟು ಮೂಲಕ ಭಾರತೀಯ ಹಾಗೂ ಕರ್ನಾಟಕ ರಂಗಗೀತೆಗೆ ತಮ್ಮದೇ ಆದ ಪ್ರತಿಮಾತ್ಮಕ ಧ್ವನಿ ಸಂಗೀತ ಸಂಕೇತಗಳನ್ನು ನಾಟಕಗಳಲ್ಲಿ ನೀಡಿದ್ದಾರೆ ನಾಟಕವನ್ನು ನಿರ್ದೇಶಿಸಿದ್ದಾರೆ ಎಂಬುದನ್ನು ಈ ಅಧ್ಯಾಯದಲ್ಲಿ

ಸಂಶೋಧಿಸಬಹುದು.

ಪ್ರಸನ್ನ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಶಾಲೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿ ಎಂಬ ಹೆಗ್ಗಳಿಕೆ ಸಂಪಾದಿಸಿದ ಕೀರ್ತಿ ಅವರದು. ಪ್ರಸನ್ನರು ದೆಹಲಿಯ ನಾಟಕ ಶಾಲೆಯಲ್ಲಿದ್ದ ದಿನಗಳಲ್ಲಿ ನಿರ್ದೇಶಿಸಿದ ನಾಟಕಗಳಲ್ಲಿ ಗಾಂಧಿ, ಉತ್ತರ ರಾಮಚರಿತಂ, ಅಗ್ನಿ ಔರ್ ಬರ್ ಕಾ, ಘ್ಯೂಜಿಯಾಮಾ ಪ್ರಮುಖವಾದವು. ಪ್ರಸನ್ನರು ನಿರ್ದೇಶಿಸಿದ ನಾಟಕಗಳಲ್ಲಿ ತುಘಲಕ್, ಗೆಲಿಲಿಯೋ, ಹುತ್ತವ ಬಡಿದರೆ, ತದ್ರೂಪಿ, ಕದಡಿದ ನೀರು, ತಾಯಿ, ದಂಗೆಯ ಮುಂಚಿನ ದಿನಗಳು, ಹ್ಯಾಮ್ಲೆಟ್, ಮಹಿಮಾಪುರ ಮುಂತಾದವು ಪ್ರಮುಖವೆನಿಸಿವೆ. ತಮಿಳುನಾಡು, ಕೇರಳ, ಮಧ್ಯಪ್ರದೇಶ, ಬಿಹಾರಗಳಲ್ಲಿ ರಂಗಭೂಮಿ ಅಧ್ಯಯನಕ್ಕಾಗಿ ಅವರು ವ್ಯಾಪಕವಾಗಿ ಪ್ರವಾಸ ಕೈಗೊಂಡಿದ್ದರು. ಪ್ರಸನ್ನ ರವರ ರಂಗ ಪ್ರಯೋಗಗಳಲ್ಲಿ ವರ್ತಮಾನದ ರಾಜಕೀಯವನ್ನು ಮುಖಾಮುಖಿಯಾಗಿಸುತ್ತಾರೆ. ಪ್ರಸನ್ನ ರವರ ರಂಗ ಪ್ರಯೋಗಗಳಲ್ಲಿ ಪ್ರತಿಮೆಗಳು ರಾಜಕೀಯವಾಗಿ ಸಾಂಸ್ಕೃತಿಕವಾಗಿ ಒಂದು ತತ್ವ ಚಿಂತನೆ ಹಿನ್ನೆಲೆಯಲ್ಲಿ ಶೋಧಿತವಾಗುತ್ತವೆ.

ಸಿ ಜಿ ಕೃಷ್ಣಸ್ವಾಮಿ ರಂಗಭೂಮಿಯಲ್ಲಿ ಸಿ.ಜಿ.ಕೆ ಎಂಬುದು ವಿಶಿಷ್ಟತೆಗೆ ಹೆಸರು. "ರಂಗಭೂಮಿಯ ಮುಖೇನ ಸಾಂಸ್ಕೃತಿಕ ತಲ್ಲಣಗಳನ್ನು ಅಭಿವ್ಯಕ್ತಿಗೊಳಿಸಿದವರು ರಂಗತಜ್ಞರಾಗಿ, ನಿರ್ದೇಶಕರಾಗಿ, ನಾಟಕಕಾರರಾಗಿ, ಮಹಾನ್ ಸಂಘಟಕರಾಗಿ ಬೆಳೆದರು. ಅವರು ತಾವೇ ಬರೆದು ನಿರ್ದೇಶಿಸಿದ ನಾಟಕಗಳು ಹಲವಾರು. ಬೆಲ್ಚಿ, ಭಾರತದರ್ಶನ, ಸೈಕ್ಲೋನ್, ಪಂಚತಾರ, ಮೇಡೇ, ಅಲ್ಲೇ ಇದ್ದೋರು, ದೌಡ್‌ಗಾಂ, ದೇವರ ಮುಂದೆ ಕಾದು ಕುಂತ ಬಸವ, ಒಡಲಾಳ, ಅಬೋಲಿನ. ಕಳ್ಳಿಯಲ್ಲಿ ಕೆಂಪು ಹೂವು. ಮುಂತಾದುವುಗಳಿಗೆ ನಾಟಕರೂಪ ನೀಡಿ ರಂಗದ ಮೇಲೇರಿಸಿದರು. ಸಿ.ಜಿ. ಕೆ ಅವರು ನಿರ್ದೇಶಿಸಿದ ನಾಟಕಗಳು ಒಡಲಾಳ, ಮಹಾಚೈತ್ರ, ಸುಲ್ತಾನ ಟಿಪ್ಪು, ನೀಗಿಕೊಂಡ ಸಂಸ, ಕಾಲಜ್ಞಾನಿ ಕನಕ, ಅಂಬೇಡ್ಕರ್, ಯಯಾತಿ, ಶೇಕ್ಸ್‌ಪಿಯರನ ಸ್ವಪ್ನನೌಕೆ, ಜ್ಯೂಲಿಯಸ್ ಸೀಸರ್, ತುಘಲಕ್, ಕುಸುಮಬಾಲೆ, ವೈಶಂಪಾಯನ ತೀರ, ರುಡಾಲಿ, ಚಕೋರಿ, ಒಥೆಲೊ, ಶೋಕಚಕ್ರ, ದಂಡೆ, ಇಗೋ ಮುಗಿಲು ಅಗೋಪಂಜರದವರೆಗೆ ಮುಂತಾದವು." 'ಕತ್ತಲೆ ಬೆಳದಿಂಗಳೊಳಗೆ' ಪ್ರಕಟಗೊಂಡಿದೆ. ಆಧುನಿಕ ಕನ್ನಡ ರಂಗಭೂಮಿಯ ಖ್ಯಾತ ರಂಗ ನಿರ್ದೇಶಕ ಸಿ.ಜಿ.ಕೆ. (ಸಿ. ಜಿ. ಕೃಷ್ಣಸ್ವಾಮಿ). ರಂಗಸಂಘಟಕರಾಗಿ, ರಂಗ ನಿರ್ದೇಶಕರಾಗಿ, ಬೆಳಕಿನ ವಿನ್ಯಾಸಕಾರರಾಗಿ ಹಾಗೂ ಪ್ರಗತಿಪರ ಚಿಂತಕರಾಗಿ ವಿಶಿಷ್ಟ ಸ್ಥಾನ– ಮಾನ ಗಳಿಸಿಕೊಂಡಿದ್ದಾರೆ. ಯಾವುದೇ ಶಾಸ್ತ್ರೀಯ ರಂಗ ತರಬೇತಿ, ಔಪಚಾರಿಕ ಅಧ್ಯಯನ ಇಲ್ಲದೆ, ಸ್ವಂತ ಪ್ರತಿಭೆ, ಪರಿಶ್ರಮ ಮತ್ತು ಕಲ್ಪಕತೆಗಳ ಮೇಲೆ ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಂಡವರು. ಪ್ರಸ್ತುತ ಕೃತಿಯು ಅತ್ಯಂತ ಸರಳವಾಗಿ ಅವರನ್ನು ಮತ್ತು ಅವರ ಸಾಧನೆಯನ್ನು ಪರಿಚಯಿಸುತ್ತದೆ. ಇವರ ರಂಗ ಪ್ರಯೋಗಗಳು ಬೆಳಕು. ರಂಗಸಜ್ಜಿಗೆ. ಸಾಮಾಜಿಕ ಪ್ರಜ್ಞೆಯ ಪ್ರತಿಮೆಗೆ ಹೆಚ್ಚು ಹತ್ತಿರವಾಗುವಂತಹದು. ಇವರ ರಂಗ ಪ್ರಯೋಗಗಳಲ್ಲಿ ವಾಸ್ತವವಾದದ ಪ್ರತಿಮೆಗಳು ಮತ್ತು ಅಭಿವ್ಯಕ್ತಿ ವಾದದ ಪ್ರತಿಮೆಗಳನ್ನು ಈ ಅಧ್ಯಯನದಲ್ಲಿ ಸಂಶೋಧಿಸಬಹುದು.

ಸಿ ಬಸವಲಿಂಗಯ್ಯ. ದೇವನೂರು ಮಹಾದೇವ ಅವರ ಕುಸುಮಬಾಲೆ. ರಸ್ತೆ. ಆಂಟಿಗೋನ್. ಅಂಧಯುಗ್.ಶೂದ್ರ ತಪಸ್ವಿ. ಟಿಪ್ಪುವಿನ ಕನಸುಗಳು. ರಾಜ ಈಡಿಪಸ್. ಬಲ್ಗೆರ್ ಕೋರಲ್.ಅಲಮಾನ ಅದ್ಭುತ ನ್ಯಾಯ.ಎರೋಬಿ.ಶೇಕ್ಸ್‌ಪಿಯರ್‌ನ ಎ ಮಿಡ್ ಸಮ್ಮರ್. ನೈಟ್ಸ್ ಡ್ರೀಮ್ಸ್. ಲಂಕೇಶರಿಗೆ ನಮಸ್ಕಾರ, (ಪಿ. ಲಂಕೇಶ್ ಅವರ ಏಕಾಂಕ ನಾಟಕಗಳು, ಕವನ, ಸಣ್ಣ ಕಥೆ, ಟೀಕೆ–ಟಿಪ್ಪಣಿ ಇತ್ಯಾದಿಗಳ ವೇದಿಕೆ ರೂಪಾಂತರ) 2005

– ಮಕ್ಕಳಿಗಾಗಿ ಜನಪದ ಮಹಾಭಾರತ ಎಂಬ ಮೆಗಾ ನಾಟಕವನ್ನು ನಿರ್ದೇಶಿಸಿದರು, ಇದರಲ್ಲಿ 400 ಮಕ್ಕಳು ಪ್ರದರ್ಶಿಸಿದರು ಮತ್ತು ಸಮೂಹ ಮತ್ತು ಮಾಧ್ಯಮಗಳಿಂದ ಮೆಚ್ಚುಗೆ ಪಡೆದರು. ಸಾಂಬ ಶಿವ ಪ್ರಹಸನ. ಪಾಗಾಲ ರಾಜ. ಜಂಗಮದೇಗೆ. ಮ್ಯಾಕ್ ಬೆತ್. ವೇನರ ವೇಮನ. ಸೇವೂಜ್ ನಾಗರಾತ್ ಶಿನ್. ಶೂಲಾರ್ ಬ್ರೂಥೋ. ಏಕಲವ್ಯನ ಹೆಬ್ಬೆರಳು. ಎದೆಗಾರಿಕೆ. ಸಿ.ಬಸಲಿಂಗಯ್ಯ ನಿರ್ದೇಶನದ ರಂಗ ಪ್ರಯೋಗಗಳಲ್ಲಿ ಮುಖ್ಯವಾಗಿ.. ಗಾಂಧಿ ವರ್ಸಸ್ ಗಾಂಧಿ. ಈ ನಾಟಕಗಳಲ್ಲಿ ರಾಜಕೀಯ ಸ್ಥಿತ್ಯಂತರಗಳ ಬಿಕ್ಕಟ್ಟುಗಳನ್ನು ಒಳಗೊಂಡ ಪ್ರತಿಮೆಯ ಹುಡುಕಾಟ ಈ ಪ್ರಯೋಗದಲ್ಲಿ ಕಾಣಬಹುದಾಗಿದೆ. ಒಟ್ಟಾರೆಯಾಗಿ ಸಿ. ಬಸವಲಿಂಗಯ್ಯನವರ ರಂಗ ಪ್ರಯೋಗವು ಹೊಸ ಹೊಸ ನಮೂನೆಯ ರಂಗ ಪ್ರತಿಮೆಗಳ ಶೋಧಕ್ಕೆ ಮುಖ್ಯವೆನಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಮರುಳಸಿದ್ದಪ್ಪ ಕೆ., (2013), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಅಂಕಿತ ಪುಸ್ತಕ.
2. ಲಿಂಗದೇವರು ಹಳೆಮನೆ, (2009), ರಂಗ ರೂಪ, ಮೈಸೂರು: ನಿರಂತರ ಪ್ರಕಾಶನ.
3. ಸಿಂಧುವಳ್ಳಿ ಅನಂತಮೂರ್ತಿ, (1973), ಗುಬ್ಬಿ ಕಂಪನಿ, ಮೈಸೂರು: ಮೈಸೂರು ಪ್ರಿಂಟ್ ಅಂಡ್ ಪಬ್ಲಿಕೇಶನ್ ಹೌಸ್.
4. ಹನುಮಂತಯ್ಯ ಎಲ್. (ಸಂ.), (1996), ರಂಗಭೂಮಿ ಅಂತರಂಗ, ಬೆಂಗಳೂರು: ಹಂದರ ಪ್ರಕಾಶನ.
5. ರಂಗನಾಥ ಎಸ್. ಕೆ., (1978), ಕರ್ನಾಟಕ ರಂಗಭೂಮಿ, ಮೈಸೂರು: ಸುರುಚಿ ಪ್ರಕಾಶನ.
6. ಅಕ್ಷರ ಕೆ. ವಿ., (2010), ರಂಗ ಪ್ರಪಂಚ, ಹೆಗ್ಗೋಡು: ಅಕ್ಷರ ಪ್ರಕಾಶನ.
7. ಅಕ್ಷರ ಕೆ. ವಿ., (2012), ರಂಗ ಪ್ರಯೋಗ, ಹೆಗ್ಗೋಡು: ಅಕ್ಷರ ಪ್ರಕಾಶನ.